ನೀವು ಕಳಹಂಸದಂತೆ ಗಂಭೀರವಾಗಿ ನಡೆಯುವ, ಕಸ್ತೂರಿ ಸುವಾಸನೆಯಿಂದ ಕೂಡಿದ ಉಸಿರುಳ್ಳ, ಚಿಗುರಿನಂತೆ ತುಟಿಯುಳ್ಳ, ಕಮಲದಂತೆ ಮುಖವುಳ್ಳ, ದುಂಬಿಯಂತೆ ಮುಂಗುರುಳುಳ್ಳ, ತಾವರೆಯಂತೆ ಕಣ್ಣುಗಳುಳ್ಳ, ಕೋಗಿಲೆಯಂತೆ ಸ್ವರವುಳ್ಳ ಸೀತೆಯನ್ನು ಕಂಡಿರೇ?

'ರಾಮಚಂದ್ರಚರಿತ ಪುರಾಣ'ದ ಹದಿನಾಲ್ಕನೆಯ ಆಶ್ವಾಸದಲ್ಲಿ ಬರುವ ರಾವಣನ ಮನಃಪರಿವರ್ತನೆಯ ಭಾಗ ರಾಮಾಯಣದ ಬಹುಮುಖ್ಯ ಪುನರ್ಲೇಖನವಾಗಿದೆ. ಯುದ್ಧಕ್ಕೆ ಸನ್ನದ್ಧನಾಗಿರುವ ರಾವಣ ಮಂಡೋದರಿಯ ಬಾಡಿದ ಮುಖವನ್ನೂ, ಸಮಸ್ತ ಅಂತಃಪುರವನ್ನು ನೋಡಿ, 'ಜಾನಕೀ ಮುಖಾಬ್ಜಮನವಲೋಕಿಸಲ್' ಕಾತರನಾಗಿ ಪ್ರಮದವನಕ್ಕೆ ಬರುತ್ತಾನೆ; ಹೇಗೆಂದರೆ 'ಅರಲಂಬುಗಳಿಲ್ಲದ ಕಾಮನೆಂಬಿನಂ'. ಸೀತಾಪಹರಣಕ್ಕೆ ಕಾರಣವಾದ ಆತನ ಮನಃಸ್ಥಿತಿಗೂ, ಈ ಸಂದರ್ಭದಲ್ಲಿನ ಪ್ರತಿಕ್ರಿಯೆಗೂ ಬಹಳಷ್ಟು ಅಂತರವಿದೆ. ಈ ಪದ್ಯಗಳನ್ನು ಗಮನಿಸಿ:

ಕದಡಿದ ಸಲಿಲಂ ತಿಳಿವಂ
ದದೆ ತನ್ನಿಂತಾನೆ ತಿಳಿದ ದಶವದನಂಗಾ
ದುದು ವೈರಾಗ್ಯಂ ಸೀತೆಯೊ
ಳುದಾತ್ತನೊಳ್ ಪುಟ್ಟದಲ್ತೆ ನೀಲೀರಾಗಂ

ಪತ್ತುವಿಡದಿರ್ದನೇ ರವಿ
ಪತ್ತಿದ ಸಂಧ್ಯಾನುರಾಗಮಂ ಮನದಱಿಪಿಂ
ದೆತ್ತಾನುಂ ಪೊಲ್ಲೆನಿಪುದ
ನುತ್ತಮನಾಚರಿಸಿ ಪತ್ತುವಿಡದಿರ್ದಪನೇ

ಸೀತೆಯನ್ನು ಕಂಡು ಕದಡಿ ಹೋಗಿದ್ದ ರಾವಣನ ಮನಸ್ಸು ಈಗ ತಿಳಿಯಾಗಿದೆ; ವೈರಾಗ್ಯಮುಖಿಯಾಗಿದೆ. ಹತ್ತಿಕೊಂಡ ಸಂಜೆಯ ಅನುರಾಗವನ್ನು ಸೂರ್ಯ ತೊರೆಯುವಂತೆ, ಮನಸ್ಸಿನ ದುರಾಸೆಯಿಂದ ಕೆಟ್ಟದನ್ನು ಆಚರಿಸಿ ಉತ್ತಮನಾದವನು ಅದನ್ನು ತೊರೆಯುತ್ತಾನೆ. 'ತಿಳಿ' ಎಂಬ ಶಬ್ದದ ಅರ್ಥವಿಶೇಷವಿದು: ನೀರು ತಿಳಿಯಾಗುವ ಬಗೆಗೂ, ಅರಿವು ಮೂಡುವುದಕ್ಕೂ ಸಂಬಂಧವನ್ನು ಕಲ್ಪಿಸಲಾಗಿದೆ. 'ಕರುಣಿಸುವೊಡೆನಗೆ ದಶಕಂಧರ ಧುರದೊಳ್ ರಘುತನೂಜನಾಯುಃ ಪ್ರಾಣಂಬರೆಗಂ ಬಾರದಿರು' ಎಂದು ಸೀತೆ ದೈನ್ಯತೆಯಿಂದ ಕೇಳಿಕೊಂಡು ಮೂರ್ಛಿತಳಾದಾಗ, ಅದನ್ನು ಕಂಡು ಮನನೊಂದ ರಾವಣನಲ್ಲಿ ಅನುಕಂಪೆ ಮೂಡುತ್ತದೆ: 'ಮನದೊಳೊಗೆದ ಕಾರುಣ್ಯ ರಸಮೆ ಸೀತೆಯೊಳಾದನುರಕ್ತತೆಯಂ ಕರ್ಚಿ ಕಳೆವುದುಂ'. ಉದಾತ್ತನಾದವನಲ್ಲಿ ಕೆಟ್ಟ ಅನುರಾಗ (ನೀಲಿರಾಗ) ಸ್ಥಿರವಾಗಿರಲಾರದು; ಆತ ಸಂದರ್ಭವಶಾತ್ ಅಲ್ಪವಾದುದರಲ್ಲಿ ತೊಡಗಿಯೂ ನಿರ್ಮಲ ಚಿತ್ತನಾಗಬಲ್ಲ ಎಂಬುದಕ್ಕೆ ರಾವಣನಲ್ಲಿ ಉದಿಸಿದ ಪಶ್ಚಾತ್ತಾಪವೇ ನಿದರ್ಶನವಾಗಿದೆ. ಆದರೂ, ಆತ ಲಕ್ಷ್ಮಣನಿಂದ ಹತನಾಗಬೇಕಾಗುತ್ತದೆ. ಆದರೂ ಕವಿ ರಾವಣನ ಸಾವಿಗೆ ಕೊಡುವ ಕಾರಣವಿದು: 'ಹೃದಯಂ ಸೀತಾನಿಮಿತ್ತಂ ಮನಸಿಜನಿಸೆ ಪಂಚೇಷುವಿಂ ಭಿನ್ನ ಮಾಗಿರ್ದುದು...' ಸೀತಾ ನಿಮಿತ್ತದಿಂದ, ಮನ್ಮಥನ ಪಂಚಬಾಣಗಳ ಹೊಡೆತದಿಂದ ಆತನ ಹೃದಯ ಸಾವಿಗಿಂತ ಮೊದಲೇ ಹೊಡೆದು ಹೋಗಿತ್ತು!

ಜನಪ್ರಿಯ ರಾಮಾಯಣಗಳಲ್ಲಿ ರಾಮ ನಾಯಕ; ರಾವಣ ಪ್ರತಿ ನಾಯಕ. ಆದರೆ